**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ:18/2022**

ಪಿ.ಡಬ್ಲುಃ **16** ಸಿಡಬ್ಲುಃ **31**

ಸಾಕ್ಷಿಯ ಹೆಸರು : ಆಂಜನೆಯ . ಎ .

ತಂದೆ ಹೆಸರು : ತಿಮ್ಮಾರೆಡ್ಡಿ . ಎ

ವಯಸ್ಸು : **41** ವರ್ಷ

ವೃತ್ತಿ : ಹೆಚ್ . ಸಿ . **379,** ಬ್ರೂಸ್ ಪೇಟೆ ಪೊ. ಠಾಣೆ

ವಾಸಸ್ಥಳ : ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **01-02-2023**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನಾನು ದಿಃ **07-02-2020** ರಿಂದ ಇಲ್ಲಿಯವರೆಗೆ ಬ್ರೂಸ್ ಪೇಟೆ ಪೊ . ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ **01-12-2021** ರಂದು ರಾಃ **11-00** ಗಂಟೆ ಸುಮಾರಿಗೆ ವಿಮ್ಸ್ ಬಳ್ಳಾರಿಯಿಂದ ಕೀರ್ತಿರಾಜ್ ಎನ್ನುವ ಪಿ . ಸಿ ಯಿಂದ ಪೋನ್ ಕರೆ ಬಂದಿದ್ದು , ಅದರಲ್ಲಿ ಚಾಸಾ-**1 ,8** ಇವರ ಬಗ್ಗೆ ಎಂ ಎಲ್ ಸಿ ದಾಖಲಾಗಿದ್ದ ವಿಷಯ ತಿಳಿಸಿದರು . ನಾನು ಸದರಿ ವಿಷಯವನ್ನು ಮೇಲಾಧಿಕಾರಿಗೆ ತಿಳಿಸಿ ತನಿಖಾ ಸಹಯಾಧಿಕಾರಿಯಾದ ಚಾಸಾ-**28** ರವರನ್ನು ಠಾಣೆಗೆ ಕರೆಸಿ ದಿಃ **02-12-2021** ರಂದು ರಾಃ **1-30** ರ ಸುಮಾರಿಗೆ ಠಾಣೆಯನ್ನು ಬಿಟ್ಟು ವಿಮ್ಸ್ ಆಸ್ಪತ್ರೆಗೆ ಹೋಗಿ ಸದರಿ ಗಾಯಾಳುಗಳು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇರುವ ಬಗ್ಗೆ ದೃಡಿಕರಣ ನೀಡುವಂತೆ ಮನವಿ ಸಲ್ಲಿಸಿರುತ್ತೇನೆ . ಸಾಕ್ಷಿಯೂ ನಿಪಿ-**22** ರನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**22**(ಬಿ) ಎಂದು ಗುರುತಿಸಲಾಯಿತು. ಸದರಿ ಗಾಯಾಳುಗಳು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇರುತ್ತಾರೆ ಎಂದು ವೈದ್ಯರು ದೃಡಿಕರಿಸಿದ ಮೇರೆಗೆ ಚಾಸಾ-**29** ರವರ ಸಮಕ್ಷಮ ಬೆಳಗಿನ **2-30**

ಗಂಟೆಯಿಂದ **3-30** ರ ವರೆಗೆ ಹೇಳಿಕೆಯನ್ನು ಪಡೆದು ಸದರಿ ಹೇಳಿಕೆಯನ್ನು ಚಾಸಾ-**28** ರವರು ಬರೆದಿರುತ್ತಾರೆ . ಸದರಿ ಹೇಳಿಕೆಯನ್ನು ಚಾಸಾ-**1** ರವರಿಗೆ ಓದಿ ಹೇಳಿ ಅವರ ಸಹಿ ಪಡೆದಿರುತ್ತೇನೆ . ಸಾಕ್ಷಿಯೂ ನಿಪಿ-**1** ಮತ್ತು ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**1**(ಇ) ಮತ್ತು **1**(ಎಫ್ ) ಎಂದು ಗುರುತಿಸಲಾಯಿತು . ಸದರಿ ದೂರನ್ನು ಸ್ವೀಕರಿಸಿದ ಬಗ್ಗೆ ಸಹಿ ಮಾಡಿದ್ದು ಅದನ್ನು ಸಾಕ್ಷಿಯೂ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-**1**(ಜಿ) ಎಂದು ಗುರುತಿಸಲಾಯಿತು . ನಂತರ ಠಾಣೆಗೆ ಬಂದು ಪ್ರ ವ ವರದಿಯನ್ನು ಠಾಣಾ ಗುನ್ನಾ ಸಂಖ್ಯೆ **233-2021** ಎಂದು ದಾಖಲಿಸಿ ನಮ್ಮ ಮೇಲಾಧಿಕಾರಿಗಳಿಗೆ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ . ಸಾಕ್ಷಿಯೂ ಪ್ರ ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**31** ಎಂದು , ಸಾಕ್ಷಿಯ ಇ ಸಹಿಯನ್ನು ನಿಪಿ-**31**(ಎ) ಎಂದು ಗುರುತಿಸಲಾಯಿತು . ನಂತರ ಈ ಪ್ರಕರಣದ ಕಡತವನ್ನು ಚಾಸಾ-**32** ರವರಿಗೆ ಒಪ್ಪಿಸಿರುತ್ತೇನೆ .

ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ ವಿ ಬಿ ವಕೀಲರಿಂದಃ

ನಾನು ಮೇಲೆ ಹೇಳಿದಂತೆ ಕೀರ್ತಿರಾಜ್ ರವರಿಂದ ನನಗೆ ಫೋನ್ ಕರೆ ಬಂದಿರುವುದಿಲ್ಲ , ನಾನು ಮತ್ತು ಚಾಸಾ-**28** ರವರು ವಿಮ್ಸ್ ಆಸ್ಪತ್ರೆಗೆ ಹೋಗಿರುವುದಿಲ್ಲ , ನಿಪಿ-**1** ರಂತೆ ಚಾಸಾ-**1** ರವರ ಯಾವುದೇ ಹೇಳಿಕೆಯ ದೂರನ್ನು ಪಡೆದಿಲ್ಲ ಮತ್ತು ಸದರಿ ದೂರನ್ನು ಚಾಸಾ-**28** ರವರು ಬರೆದಿಲ್ಲ ಎಂದರೆ ಸರಿಯಲ್ಲ . ಚಾಸಾ- **29** ರವರು ನನ್ನ ಕೋರಿಕೆಗೆ ಯಾವುದೇ ಪಿಟ್ ನೆಸ್ ದೃಡಿಕರಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ . ನಿಪಿ-**1** ಕ್ಕೆ ಕೆಳಗೆ ಚಾಸಾ-**29** ರವರ ಸಹಿ ಪಡೆಯಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ . ನಿಪಿ-**1** ರ ಹೇಳಿಕೆಪಡೆಯುವ ಸಮಯದಲ್ಲಿ ಚಾಸಾ-**29** ರವರು ಹಾಜರು ಇರಲಿಲ್ಲ ಕಾರಣಕ್ಕೆ ಸದರಿ ಚಾಸಾ-**29** ರವರ ಸಹಿಯನ್ನು ಪುಟದ ಮಾರ್ಜಿನಗಳಲ್ಲಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ . ಚಾಸಾ-**1** ರವರು ನನಗೆ ಹೇಳಿದ್ದು , ನಾನು ಸದರಿ ಹೇಳಿಕೆಯನ್ನು ಚಾಸಾ-**28** ರವರಿಗೆ ಹೇಳಿದ ನಂತರ ಅವರು ಬರೆದಿರುತ್ತಾರೆ . ನನ್ನ ಸಮಕ್ಷಮ ಚಾಸಾ-**1** ರವರು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ . ಉಪವಿಭಾಗಾಧಿಕಾರಿ ಬಳ್ಳಾರಿ

ಮತ್ತು ತಹಶೀಲ್ದಾರ್ ಬಳ್ಳಾರಿ ರವರ ಪ್ರಭಾವದ ಮೇರೆಗೆ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ಚಾಸಾ-8 ರವರಿಗೆ ತೌಸಿಪ್ ನು ಲಾಂಗ್ ನಿಂದ ಬಲಗೈ ನಡುಬೆರಳಿಗೆ ಹೊಡೆದನು ಎಂದು ನಿಪಿ-1 ರಲ್ಲಿ ಚಾಸಾ-1 ರವರು ಹೇಳಿ ಬರೆಸಿಲ್ಲ ಎಂದರೆ ಸರಿ . ಚಾಸಾ-1 ರವರು ಮುಕ್ ಬುಲ್ ಆರೋಪಿಯೂ ಲಾಂಗ್ ನಿಂದ ತನಗೆ ಎಡಗೈ ಹೆಬ್ಬೆರಳು ಮತ್ತು ತೋರ್ ಬೆರಳು ಮಧ್ಯದಲ್ಲಿ ಹೊಡೆದನು ಎಂದು ನಿಪಿ-1 ರಲ್ಲಿಹೇಳಿಲ್ಲ ಎಂದರೆ ಸರಿ . ಕುಳ್ಳ ರಫಿಕ್ ಈತನು ಚಾಸಾ-1 ರವರಿಗೆ ನಿನ್ನನ್ನು ಈ ದಿನ ಉಳಿಸುವುದಿಲ್ಲ ಎಂದು ಹೇಳಿದ ಬಗ್ಗೆ ನಿಪಿ-1 ರಲ್ಲಿ ಚಾಸಾ-1 ರವರು ನಮೂದಿಸಿಲ್ಲ ಎಂದರೆ ಸರಿ . 16 ಜನ ಗುಂಪಿನಲ್ಲಿ ಒಬ್ಬ ವ್ಯಕ್ತಿಯೂ ನನ್ನ ಮಗ ವಿಜಯ ಕುಮಾರ್ ಈತನಿಗ ಮುಷ್ಟಿ ಮಾಡಿ ಗುದ್ದಿದ ಎಂದು ನಿಪಿ-1 ರಲ್ಲಿ ಹೇಳಿಲ್ಲ ಎಂದರೆ ಸರಿ .

ದಿಃ 01-12-2021 ರಂದು ಸಾಃ 7-30 ಕ್ಕೆ ತಾನು ಮತ್ತು ತನ್ನ ತಮ್ಮ ಚಾಸಾ-13 ರವರು ದ್ವಿಚಕ್ರ ವಾಹನದಲ್ಲಿ ಆನಂತಪುರ ರಸ್ತೆಯಲ್ಲಿರುವ ಹೊಯ್ಸಳ ಹೋಟೆಲ್ ಹತ್ತಿರ ಹೋಗುತ್ತಿದ್ದರು , ಆ ಸಮಯದಲ್ಲಿ ರಾತ್ರಿ ನಮ್ಮ ಟ್ರ್ಯಾಕ್ಟರ್ ಗಳನ್ನು ಹೇಗೆ ಹಿಡಿಯುತ್ತೀಯ ಎಂದು ಪ್ರಶ್ನೆ ಮಾಡಿ ಈಗ ಕ್ಷಮೆ ಕೇಳುತ್ತಿಯ ಎನ್ನು ವ ಅಂಶವನ್ನು ನಿಪಿ-1 ರಲ್ಲಿ ಚಾಸಾ-1 ರವರು ಹೇಳಿಲ್ಲ ಎಂದರೆ ಸರಿ . ಘಟನೆಯ ಸಮಯದಲ್ಲಿ ನಮ್ಮ ಮನೆಯಲ್ಲಿ ವಿದ್ಯುತ್ ದ್ವೀಪ ಇದ್ದು ನಾನು ಆರೋಪಿತರನ್ನು ನೋಡಿರುತ್ತೇನೆ ಎನ್ನುವ ಅಂಶವನ್ನು ನಿಪಿ-1 ರಲ್ಲಿ ಚಾಸಾ–1 ರವರು ಹೇಳಿಲ್ಲ ಎಂದರೆ ಸರಿ .

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.

**<u>2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>**

<u>ಸತ್ರ ಮೊಕದ್ದಮೆ ಸಂಖ್ಯೆಃ</u>

ಪಿ.ಡಬ್ಲುಃ ಸಿಡಬ್ಲುಃ

ಸಾಕ್ಷಿಯ ಹೆಸರು :

ತಂದೆ ಹೆಸರು :

ವಯಸ್ಸು : ವರ್ಷ

ವೃತ್ತಿ :

ವಾಸಸ್ಥಳ :

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **02-01-2023**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸ ಅ ರವರು ಪರವಾನಿಗೆ ಕೇಳುತ್ತಾರೆ. ಸ ಅ ರವರ ವಾದವನ್ನು ಕೇಳಿ ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪರವಾನಿಗೆ ಕೊಡಲಾಯಿತು).

ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:

( ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಇರುವ ಬಿಳಿ ಬಟ್ಟೆಯಲ್ಲಿ ಹೊಲೆದು ಸೀಲ್ ಮಾಡಲಾಗಿರುವ ವಸ್ತುಗಳನ್ನು ತೆರೆಯಲು ಪ್ರಾಜ್ಞ ಸಾರ್ವಜನಿಕ ಅಭಿಯೋಜಕರು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು ).

ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ವಕೀಲರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಬಳ್ಳಾರಿ.